3ನೇ ಪ್ರ ದ ನ್ಯಾ ದಂಡಾಧಿಕಾರಿಯವರ ನ್ಯಾಯಾಲಯ, ಮೈಸೂರು.

ಸಿ.ಮಿಸ್.175/2022

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಜಯಮ್ಮ | ಪ್ರಾಸಾ ಃ1 |
| ಗಂಡನ ಹೆಸರು | ಃ | ಲೇ. ನಾಗೇಂದ್ರ | |
| ವಯಸ್ಸು | ಃ | 57 ವರ್ಷ | |
| ಉದ್ಯೋಗ | ಃ | ಡಿ ಗ್ರೂಪ್ ಪಿ ಡಬ್ಲ್ಯೂ ಡಿ | |
| ವಾಸ | ಃ | ಮೈಸೂರು | ದಿಃ 18.12.2023 |

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ. ಎಂ ವಿ ಸಿ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಹೇಳಿಕೆ ಕುರಿತು ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ಸಂಗತಿಗಳು ಗೊತ್ತು ಮತ್ತು ಸತ್ಯವಾಗಿದೆ ಎಂದು ನುಡಿದಿರುತ್ತಾರೆ.

1. ನಾನು ಕಳೆದ 5 ವರ್ಷಗಳಿಂದ ನಜರಾಬಾದ್ ನ 3 ನೇ ಕ್ರಾಸ್ ಮನೆ ಸಂಃ389 ರಲ್ಲಿ ವಾಸವಿರುತ್ತೇನೆ. ನನ್ನ ಗಂಡ ನಾಗೇಂದ್ರ ಮರಣ ಹೊಂದಿರುತ್ತಾರೆ. 1 ರಿಂದ 3 ನೇ ಎದುರುದಾರರು ನನ್ನ ಗಂಡನ ತಮ್ಮ ಮತ್ತು ತಂಗಿಯರು ಆಗಿರುತ್ತಾರೆ. ಆತನ ಇನ್ನು 3 ಜನ ಸಹೋದರಿಯರು ಮರಣ ಹೊಂದಿರುತ್ತಾರೆ. ನನ್ನ ಗಂಡನ ತಂದೆ ದಿಃ 30.11.1969 ರಂದು ನನ್ನ ಗಂಡನ ಮನೆಯಾದ ಕೆ ಆರ್ ಮೊಹಲ್ಲಾ 8 ನೇ ಕ್ರಾಸ್ ಕ್ಷೇತ್ರಿಯಾ ರಸ್ತೆ ಮನೆ ನಂ, 226 ರಲ್ಲಿ ವಾಸವಿದ್ದಾಗ ಮರಣ ಹೊಂದಿರುತ್ತಾರೆ ಎಂದು ನನ್ನ ಅತ್ತಿಗೆಯಂದಿರು ಹೇಳಿರುತ್ತಾರೆ. ನಾನು ಮತ್ತು 1 ರಿಂದ 3 ನೇ ಎದುರುದಾರರು ಅವರ ವಾರಸುದಾರರಾಗಿರುತ್ತೇವೆ. ನನ್ನ ಮಾವನ ಹೆಸರಿನಲ್ಲಿರುವ ಮನೆಯ ಖಾತೆ ಮಾಡುವ ಸಲುವಾಗಿ ಅವರ ಮರಣ ಪ್ರಮಾಣಪತ್ರದ ಅಗತ್ಯವಿರುತ್ತದೆ. ನನ್ನ ಮಾವ ಮರಣದ ಬಗ್ಗೆ ಮಾಹಿತಿ ನೀಡಬೇಕೆಂದು ನನಗೆ ತಿಳಿಯದೇ ಇದ್ದ ಕಾರಣ ಸಂಬಂಧಿಸಿದ ಅಧಿಕಾರಿಗಳಿಗೆ ನನ್ನ ಮಾವ ಮರಣದ ಮಾಹಿತಿಯನ್ನು ನಾನು ಮತ್ತು ಇತರ ಅರ್ಜಿದಾರರು ನೀಡಿರುವುದಿಲ್ಲ. ಆದ್ದರಿಂದ ನನ್ನ ಮಾವನ ಮರಣ ಪ್ರಮಾಣಪತ್ರವನ್ನು ಪಡೆಯುವ ಸಲುವಾಗಿ ಎದುರುದಾರರಿಗೆ ಅರ್ಜಿ ಸಲ್ಲಿಸಿದ್ದು ಅವರು ಅಲಭ್ಯ ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಆದ್ದರಿಂದ ನನ್ನ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರುತ್ತೇನೆ. ನನ್ನ ಅರ್ಜಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಹಾಜರು ಮಾಡಿದ್ದೇನೆ. ಸಾಕ್ಷಿಯು ಹಾಜರು ಮಾಡಿದ ಅಲಭ್ಯ ಪ್ರಮಾಣ ಪತ್ರವನ್ನು ನಿಪಿ1 ಎಂದು, ಸಾಕ್ಷಿಯು ಹಾಜರು ಮಾಡಿದ ನೋಟರಿ ಪ್ರಮಾಣಪತ್ರವನ್ನು ನಿಪಿ2 ಎಂದು, ಸಾಕ್ಷಿಯ ಆಧಾರ್ ಕಾರ್ಡ ನೋಟರೀಕೃತ ಪ್ರತಿಗಳೊಂದಿಗೆ ತಾಳೆ ನೋಡಿ ಮೂಲ ದಾಖಲಾತಿಗಳನ್ನು ಸಾಕ್ಷಿಗೆ ಹಿಂತಿರುಗಿಸಿ ನೋಟರಿ ಪ್ರತಿಗಳನ್ನು

ಕ್ರಮವಾಗಿ ನಿಪಿ3 ಎಂದು, ಮೈಸೂರು ಮಿತ್ರ ದಿನಪತ್ರಿಕೆಯನ್ನು ನಿಪಿ.4 ಎಂದು, ಅವುಗಳಲ್ಲಿರುವ ಪತ್ರಿಕಾ ಪ್ರಕಟಣೆಯನ್ನು ಕ್ರಮವಾಗಿ ನಿಪಿ4 ಎ ಗುರುತಿಸಲಾಯಿತು.

ಪಾಟೀ ಸವಾಲುಃ ಎದುರುದಾರರು ಗೈರು ಹಾಜರಾಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃಇಲ್ಲಾಃ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೆ ಸ ಇದೆ.

3ನೇ ಪ್ರ. ದ. ನ್ಯಾ. ದಂ., ಮೈಸೂರು.

Notice to respondent served. Respondent absent. 2 newspapers produced. Called out no objectors appeared. Petitioner no.2 is present and filed his affidavit. He examined as pw1. Exp1 to 6 marked. Heard. For orders by 15.04.2023.

III JMFC.,Mysuru.